# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 174–ಹೆಚ್.ಎಸ್.ಆರ್ ಬಡಾವಣೆ,

## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಶ್ರೀಮತಿ ವಿಜಯಲಕ್ಷ್ಮೀ, ಕಂದಾಯ ಅಧಿಕಾರಿಗಳು, ಬೊಮ್ಮನಹಳ್ಳಿ ವಲಯ/ಅಧ್ಯಕ್ಷರು ನೋಡಲ್ ಅಧಿಕಾರಿ ವಾರ್ಡ್ ಸಂ. 174 ರವರ ಅಧ್ಯಕ್ಷತೆಯಲ್ಲಿ ದಿನಾಂಕ: 17.09.2022 ರಂದು ಶನಿವಾರ ಬೆಳಗ್ಗೆ 11.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.174 ಹೆಚ್.ಎಸ್.ಆರ್ ಕಛೇರಿ 9ನೇ ಮುಖ್ಯ ರಸ್ತೆ, 14ನೇ ಅಡ್ಡ ರಸ್ತೆ, ಸೆಕ್ಟರ್–6, ಹೆಚ್.ಎಸ್.ಆರ್ ಬಡಾವಣೆ, ಬೆಂಗಳೂರು–560102ರಲ್ಲಿ ವಾರ್ಡ್ ನಂ.174 ಹೆಚ್.ಎಸ್.ಆರ್ ಉಪವಿಭಾಗ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಗಳು ಈ ಕೆಳಕಂಡಂತಿರುತ್ತದೆ.

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರಿಗೆ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ, ಸದಸ್ಯರಿಗೆ ಹಾಗೂ ಸಾರ್ವಜನಿಕರು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸುತ್ತಾ, ಸಭೆಯನ್ನು ಆರಂಭಿಸಲಾಯಿತು. (ಸಭೆಗೆ ಹಾಜರಾಗಿದ್ದ, ಅಧಿಕಾರಿಗಳು ಮತ್ತು ವಾರ್ಡ್ ಸದಸ್ಯರು & ಕಲ್ಯಾಣ ಸಂಘದ ಸದಸ್ಯರುಗಳ ಹಾಜರಾತಿ ಲಗತ್ತಿಸಿದೆ)

- **ಬೀದಿ ದೀಪ (ವಿದ್ಯುತ್)**

1. ವಾರ್ಡ್ ವ್ಯಾಪ್ತಿಯಲ್ಲಿ ಬಿದಿ ದೀಪ ಕಂಬಗಳಿಗೆ ಮರದ ರೆಂಬೆಗಳು ತಾಗಿದ್ದು, ಈ ಬಗ್ಗೆ ಬೆಸ್ಕಾಂ, ಅರಣ್ಯ ಮತ್ತು ಬೀದಿ ದಿಪಗಳ ಅಧಿಕಾರಿಗಳು ಸಮನ್ವಯ ಜಂಟಿ ತಪಾಸಣೆ ಮಾಡಿ ಕಂಬಗಳಿಗೆ ತಾಗಿರುವ ಮರದ ರೆಂಬೆಗಳನ್ನು ಕತ್ತರಿಸುವಂತೆ ಶ್ರೀ ಗೋವಿಂದಸ್ವಾಮಿ 1ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ರವರು ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ. **ಕ್ರಮ. ಸ.ಅ. ವಿದ್ಯುತ್**

- **ಘನತ್ಯಾಜ್ಯ ನಿರ್ವಹಣೆ**

1. ಹಿಂದಿನ ಸಭೆಯ ದಿನಾಂಕ: 20.07.2022 ರಂದು ಶ್ರೀ ಗೋಪಾಲ ಕೃಷ್ಣ 2ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ ರವರು ಚರ್ಚಿಸಿರುವ ವಿಷಯದ ಬಗ್ಗೆ ಇಂದಿನ ಸಭೆಯಲ್ಲಿ ಶ್ರೀ ವಿನೋದ್.ಜಿ ಹಿ.ಆ.ಪ ವಾರ್ಡ್. ಸಂ. 174 ರವರು ಪಾದಚಾರಿ ಮಾರ್ಗದಲ್ಲಿ, ತಳ್ಳುವಗಾಡಿ, ವ್ಯಾಣಿಜ್ಯ ಅಂಗಡಿ ಮುಂಭಾಗ ಖಾಯಂ ಶೆಡ್‌ಗಳನ್ನು ತೆರವುಗೊಳಿಸಲಾಗುತ್ತಿದ್ದು, ಪಾದಚಾರಿ ಮಾರ್ಗದಲ್ಲಿ ತಳ್ಳುವ ಗಾಡಿಗಳನ್ನು ಮಡಿವಾಳ ಮಾರ್ಕೆಟ್ ಮತ್ತು ಕರ್ಮಸಿಲ್‌ಸ್ಟ್ರೀಟ್ ಮಾದರಿ Hacker Zone ಸ್ಥಾಪಿಸಿ ಸ್ಥಳಾಂತರಿಸಲು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.
2. ಹಿಂದಿನ ಸಭೆಯ ದಿನಾಂಕ: 20.07.2022 ರಂದು ಕಸ ವಿಲೇವಾರಿಗೆ ತಗಲುವ ಮಾಸಿಕ ವೆಚ್ಚದ ಪೂರ್ಣ ವಿವರವನ್ನು ಪ್ರಸ್ತಾಪಿಸಿದ್ದು, ಈ ಬಗ್ಗೆ ಇಂದಿನ ಸಭೆಯಲ್ಲಿ ಶ್ರೀಮತಿ ಸತ್ಯವಾಣಿ, ಕಿ.ಅ.ಪ ವಾರ್ಡ್ ನಂ. 174 ರವರು ಮಾಸಿಕ ಒಂದು ಆಟೋಗೆ ಒಟ್ಟು 58717 ರೂಗಳನ್ನು ಮತ್ತು ಕಾಂಪ್ಯಕ್ಟರ್‌ಗೆ ರೂ. 179121 ರೂಗಳು, ಒಟ್ಟು 28,33,000.00 ರೂಗಳನ್ನು ಕಸ ವಿಲೇವಾರಿಗೆ ತಗಲುವ ಮಾಸಿಕ ವೆಚ್ಚವೆಂದು ಸಭೆಗೆ ಮಾಹಿತಿ ಒದಗಿಸಿರುತ್ತಾರೆ.

- **ಕಾಮಗಾರಿ**

1. ಹಿಂದಿನ ಸಭೆಯ ದಿನಾಂಕ: 20.07.2022 ರಂದು ಹೆಚ್.ಎಸ್.ಆರ್ ಬಡಾವಣೆ ವಾರ್ಡ್ ವ್ಯಾಪ್ತಿಯಲ್ಲಿ ಹೂಳೆತ್ತಲು ತಿಳಿಸಿದ್ದು, ಈ ಬಗ್ಗೆ ಇಂದಿನ ಸಭೆಯಲ್ಲಿ ಸ.ಅ. ರವರು ಹೂಳೆತ್ತಲು ಈ ಕಛೇರಿಯಲ್ಲಿ ಸ್ವೀಕೃತವಾಗಿರುವ ದೂರುಗಳ ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಲಾಗುತ್ತಿದ್ದು, ಹೂಳೆತ್ತುವ ಕೆಲಸ ಪ್ರಗಯತ್ತಿಯಲ್ಲಿರುತ್ತದೆ ಎಂದು ಸಭೆಗೆ ತಿಳಿಸಿದರು.
2. ಹಿಂದಿನ ಸಭೆಯ ದಿನಾಂಕ: 20.07.2022 ರಂದು ಶ್ರೀ ಗೋಪಾಲ ಕೃಷ್ಣ, 2ನೇ ಸೆಕ್ಟರ್ ಕ್ಷೇಮಾಭಿವೃದ್ಧಿ ಸಂಘ ಸದಸ್ಯರು ಪ್ರಸ್ತಾಪಿಸಿರುವ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ವಿಷಯದ ಬಗ್ಗೆ ಇಂದಿನ ಸಭೆಯಲ್ಲಿ ಸ.ಅ. ರವರು ಅಮೃತ ನಗರೋತ್ಥಾನ ಅನುದಾನದಡಿಯಲ್ಲಿ ಟೆಂಡರ್ ಆಗಿದ್ದು, 15 ದಿನಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.
3. ಹೆಚ್.ಎಸ್.ಆರ್ ಉಪವಿಭಾಗಲ್ಲಿ ನೀರೆತುವ ಮೋಟರ್ ಪಂಪ್‌ಗಳು 40 ಹೆಚ್.ಪಿ ಮತ್ತು 5 ಹೆಚ್.ಪಿ. ಗಳ ಬಗ್ಗೆ ಮಾಹಿತಿ ಶ್ರೀ ಚಂದ್ರಶೇಖರ ಸದಸ್ಯರು ರವರು ಕೋರಿದರು. ಈ ಬಗ್ಗೆ ಮುಂದಿನ ಸಭೆಯಲ್ಲಿ ಮಾಹಿತಿ ಒದಗಿಸಲಾಗುವುದೆಂದು ಸ.ಅ.ರ ರವರು ಸಭೆಯಲ್ಲಿ ತಿಳಿಸಿರುತ್ತಾರೆ.

(2...)

4. ಹೆಚ್.ಎಸ್.ಆರ್ ಬಡಾವಣೆ, 3ನೇ ಸೆಕ್ಟರ್‌ನಲ್ಲಿ ಚರಂಡಿಯನ್ನು ನಿರ್ಮಿಸಲು ಶ್ರೀ ನರೇಂದ್ರ ಬಾಬು, ಕ್ಷೇಮಾಭಿವೃದ್ಧಿ ಸಂಘ, ರವರು ಪ್ರಸ್ತಾಪಿಸಿದ್ದು, ಈ ಬಗ್ಗೆ ಸ.ಅ. ರವರು ಸ.ಅ. ರವರು ಅಮೃತ ನಗರೋತ್ಥಾನ ಅನುದಾದಡಿಯಲ್ಲಿ ಟೆಂಡರ್ ಆಗಿದ್ದು, 15 ದಿನಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.
5. ಹೆಚ್.ಎಸ್.ಆರ್ ಬಡಾವಣೆ 6ನೇ ಮತ್ತು 7ನೇ ಸೆಕ್ಟರ್, 6ನೇ ಮುಖ್ಯ ರಸ್ತೆ, ಸ್ಟಾರ್ ಮಾರ್ಕೆಟ್ ಪಕ್ಕದಲ್ಲಿ 5ನೇ ಮುಖ್ಯ ರಸ್ತೆ, 17ನೇ ಅಡ್ಡ ರಸ್ತೆ, ಸ್ವೀಟ್ ಚಾರಿಟ್ ಬೇಕರಿ, 9ನೇ ಮುಖ್ಯ ರಸ್ತೆ, ಪಶ್ಚಿಮ ಭಾಗದ ರಸ್ತೆಗಳಾದ, 14ನೇ, 14ನೇ "ಎ", 14ನೇ "ಬಿ" 15ನೇ, 15"ಎ" ಅಡ್ಡ ರಸ್ತೆಯಲ್ಲಿ ಇತ್ತೀಚಿಗೆ ಸುರಿದ ಭಾರಿ ಮಳೆಯಿಂದಾಗಿ ಒಳಚರಂಡಿ ನೀರು 2 ರಿಂದ 3 ಅಡಿ ನೀರು ರಸ್ತೆಯಲ್ಲಿ ನಿಲ್ಲುತ್ತಿದ್ದು, ಹಾಗೂ ಮಳೆನಿಂತ 30 ನಿಮಿಷಗಳ ಸಮಯದಲ್ಲಿ ಈ ರಸ್ತೆಗಳಲ್ಲಿ ಒಳಚರಂಡಿ ನೀರು ಶೇಕರಣೆಯಾಗಿರುತ್ತದೆ ರಸ್ತೆಗಳಿಗೆ ಎಲ್ಲಿಂದ ಹರಿದು ಬರುತ್ತದೆ ಎಂಬುದಾಗಿ ಸರ್ವೆ ಮಾಡಿ ಸೂಕ್ತ ಕ್ರಮ ಜರುಗಿಸಬೇಕೆಂದು ಶ್ರೀ ನಾಗರಾಜ ರೆಡ್ಡಿ ರವರು ಸಭೆಯಲ್ಲಿ ಕೋರಿರುತ್ತಾರೆ ಹಾಗೂ ಈ ತರಹ ನಿಂತ ನೀರು ಸುಮಾರು 1 ಗಂಟೆ ನಂತರ ಪುನಃ ಹರಿದು ಹೋಗುತ್ತದೆ. ಈ ಒಳಚರಂಡಿ ನೀರು ರಾಜುಕಾಲುವೆಯಿಂದ 9ನೇ ಮುಖ್ಯ ರಸ್ತೆ ಒಳಚರಂಡಿಗೆ ಹಿಂಬದಿಯಾಗಿ ಹರಿದು ಮೇಲ್ಕಂಡ ರಸ್ತೆಗಳಿಗೆ ಹರಿದು ಬರುತ್ತದೆ. ಆದುದರಿಂದ ದಕ್ಷಿಣ ಭಾಗದ ಒಳಚರಂಡಿಯನ್ನು ರಾಜುಕಾಲುವೆಯಲ್ಲಿ ಓರೆಯಾಗಿ ತಿರುಗಿಸಿದರೆ ಹಿಂಬದಿ ಹರಿಯುವ ನೀರನ್ನು ತಡೆಯಬಹುದೆಂದು ಹಾಗೂ ಈ ಕಾರ್ಯವನ್ನು ಅತೀ ಶೀಘ್ರವಾಗಿ ಕೈಗೆತ್ತಿಕೊಳ್ಳಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.

   **ಕ್ರಮ: ಸಹಾಯಕ ಅಭಿಯಂತರರರು, ಕಾಮಗಾರಿ ಮತ್ತು ಬೃಹತ್ ಮಳೆ ನೀರುಗಾಲುವೆ**

- **<u>ಕಂದಾಯ ಇಲಾಖೆ,</u>**

1. ಹಿಂದಿನ ಸಭೆಯ ದಿನಾಂಕ: 20.07.2022 ರಂದು ಚರ್ಚಿಸಿರುವ ವಿಷಯದ ಬಗ್ಗೆ ಇಂದಿನ ಸಭೆಯಲ್ಲಿ ಹೆಚ್.ಎಸ್.ಆರ್ ಬಡಾವಣೆಯ ಖಾಲಿ ನಿವೇಶನಗಳಲ್ಲಿ ಹುಲ್ಲು, ಗಿಡಗಳು ಮತ್ತು ಇತರೆ ಅನುಪಯುಕ್ತ ವಸ್ತುಗಳಿಂದ ಕೂಡಿರುವುದರಿಂದ ಕೆಲವು ನಿರ್ಜನ ಪ್ರದೇಶದ ಖಾಲಿ ನಿವೇಶನದ ಸುತ್ತಮುತ್ತ ಕಳ್ಳತನವಾಗುತ್ತಿದ್ದು, ಹಾಗೂ ಖಾಲಿ ನಿವೇಶನದ ಮಾಲೀಕರಿಗೆ ಈ ಬಗ್ಗೆ ತಿಳಿಸಿದರು ಪ್ರತಿಕ್ರಿಯಿಸುತ್ತಿಲ್ಲವೆಂದು ಶ್ರೀ ಗೋವಿಂದ ಸ್ವಾಮಿ 1ನೇ ಸೆಕ್ಟರ್, ಕ್ಷೇಮಾಭಿವೃದ್ಧಿ ಸಂಘ ರವರು ತಿಳಿಸಿ ಹಾಲಿ ನಿವೇಶನದ ಮಾಲೀಕರಿಗೆ ಆನ್‌ಲೈನ್ ನಿಬಂಧನೆ ದಂಡ ವಿಧಿಸುವಂತೆ ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಶ್ರೀ ಚಂದ್ರಶೇಖರ ವಾರ್ಡ್ ಸದಸ್ಯರು ಮಾತನಾಡುತ್ತಾ, ಬಿಬಿಎಂಪಿ ಕಡೆಯಿಂದ ಸುತ್ತೋಲೆ ಪ್ರಕಟಿಸುತ್ತಾ, ಸಹಾಯಕ ಕಂದಾಯ ಅಧಿಕಾರಿಗಳು ರವರು ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

- **<u>ಯೋಜನೆ ವಿಭಾಗ</u>**

1. ಹಿಂದಿನ ಸಭೆಯ ದಿನಾಂಕ: 20.07.2022 ರಂದು ಚರ್ಚಿಸಿರುವ ವಿಷಯದ ಬಗ್ಗೆ ಇಂದಿನ ಸಭೆಯಲ್ಲಿ ಅಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಾಸಿಗೆ ವ್ಯವಸ್ಥೆ ಕಡಿಮೆ ಇದ್ದು, ಇನ್ನೂ ಹೆಚ್ಚಾಗಿ ಹಾಸಿಗೆ ವ್ಯವಸ್ಥೆಯನ್ನು ಮಾಡಲು ಸಭೆಯಲ್ಲಿ ತಿಳಿಸಿದರು.

   **ಕ್ರಮ : ಹಿರಿಯ ಆರೋಗ್ಯ ಪರಿವೀಕ್ಷಕರು**
2. ಹಿಂದಿನ ಸಭೆಯ ದಿನಾಂಕ: 20.07.2022 ರಂದು ಸರ್ಕಾರಿ ಶಾಲೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಮತ್ತು ಶೀಕ್ಷಕರನ್ನು ನೇಮಿಸುವಂತೆ ಸಭೆಯಲ್ಲಿ ಪ್ರಸ್ತಾಪಿಸಿದ್ದು, ಈ ಬಗ್ಗೆ ಶಿಕ್ಷಣಾ ಇಲಾಖೆಗೆ ಪತ್ರ ಬರೆಯಲಾಗುವುದೆಂದು ಸ.ಅ/ಕಾರ್ಯದರ್ಶಿಗಳು ಸಭೆಯಲ್ಲಿ ತಿಳಿಸಿದರು.

- **<u>ಬೃಹತ್ ಮಳೆ ನೀರುಗಾಲುವೆ</u>**

1. ವಾರ್ಡ್ ವ್ಯಾಪ್ತಿಯ 5ನೇ ಮತ್ತು 9ನೇ ಮುಖ್ಯ ರಸ್ತೆಯ ರಾಜುಕಾಲುವೆಗಳಲ್ಲಿ ಹೂಳೆತ್ತಲು ಹಲವು ಬಾರಿ ಮೌಖಿಕವಾಗಿ ಸಭೆಯಲ್ಲಿ ತಿಳಿಸಿದರು ಇಲ್ಲಿಯವರೆಗೂ ಕ್ರಮ ಕೈಗೊಂಡಿರುವುದಿಲ್ಲವೆಂದು ಶ್ರೀ ಬಿ.ಎನ್.ಆರ್ ರೆಡ್ಡಿ ಸದಸ್ಯರು ಆಕ್ಷೇಪಿಸಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಗೈರು ಹಾಜರಾಗಿದ್ದ, ಸ.ಅ. ಬೃಹತ್ ನೀರುಗಾಲುವೆ ರವರಿಗೆ ಜಂಟಿ ಆಯುಕ್ತರು ಬೊಮ್ಮನಹಳ್ಳಿ ವಲಯ ರವರು ದೂರವಾಣಿ ಮುಖಾಂತರ ಕ್ರಮ ಕೈಗೊಳ್ಳಲು ಸೂಚಿಸಿದರು.

- **<u>ಪೋಲಿಸ್ ಸಂಚಾರಿ ವಿಭಾಗ</u>**

1. ಹಿಂದಿನ ಹಲವು ಸಭೆಗಳಲ್ಲಿ ಹೆಚ್.ಎಸ್.ಆರ್ ಬಡಾವಣೆಯ 18ನೇ ಅಡ್ಡ ರಸ್ತೆ, 14ನೇ ಮುಖ್ಯ ರಸ್ತೆ 3ನೇ ಸೆಕ್ಟರ್, ವಾಹನ ಸವಾರರಿಗೆ ಮತ್ತು ಸ್ಥಳೀಯರಿಗೆ ಓಡಾಡದಂತೆ ಕೆಲವು ಖಾಸಿಗೆ ವ್ಯಕ್ತಿಗಳು ರಸ್ತೆಗಳನ್ನು ಮುಚ್ಚಿದ್ದು ಓಡಾಡಲು ಅನುವು ಮಾಡಿಕೊಡಲು ಶ್ರೀ ಚಂದ್ರಶೇಖರ ವಾರ್ಡ್ ಸದಸ್ಯರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ. ಈ ಬಗ್ಗೆ ಸ.ಅ./ಕಾರ್ಯದರ್ಶಿಗಳು ಪತ್ರ ಬರೆಯಲಾಗುವುದೆಂದು ಸಭೆಗೆ ತಿಳಿಸಿದರು.

(3)

2. 5ನೇ ಮುಖ್ಯ ರಸ್ತೆ, ಸರ್ವಿಸ್ ರಸ್ತೆಯಲ್ಲಿ ಬೃಹತ್ ಮಳೆ ನೀರುಗಾಲುವೆ ಇಲಾಖೆಯಿಂದ ಕಾಮಗಾರಿ ಕೈಗೆತ್ತಿಕೊಂಡಿದ್ದು, 5ನೇ ಮುಖ್ಯ ರಸ್ತೆಯಿಂದ (ಸಿಲ್ಕ್ ಬೋರ್ಡ್ ಮಾರ್ಗವಾಗಿ ಹೊಸೂರು ಮುಖ್ಯ ರಸ್ತೆಯ ಕಡೆಗೆ) ಹೋಗುವ ವಾಹನಗಳಿಗೆ ಅಡಚಣೆಯಾಗಿದ್ದು, 6ನೇ ಸೆಕ್ಟರ್ ಹೆಚ್.ಎಸ್.ಆರ್ ಬಡಾವಣೆಯ ಐ.ಎ.ಎಸ್. ಕಾಲೋನಿ 1ನೇ ಎ ಮುಖ್ಯ ರಸ್ತೆ ಕಡೆಗೆ ಹೋಗಲು ಅನುವು ಮಾಡಲು ವಾರ್ಡ್ ಸಮಿತಿಯ ಸದಸ್ಯರು ರವರುಗಳು ಸಭೆಯಲ್ಲಿ ಕೋರಿರುತ್ತಾರೆ. ಈ ಬಗ್ಗೆ ಸ.ಅ./ಕಾರ್ಯದರ್ಶಿಗಳು ಪತ್ರ ಬರೆಯಲಾಗುವುದೆಂದು ಸಭೆಗೆ ತಿಳಿಸಿದರು.
3. 2ನೇ "ಎ" & "ಬಿ" ಮುಖ್ಯ ರಸ್ತೆಯಲ್ಲಿ ರಸ್ತೆ ಉಬ್ಬು ಮತ್ತು ಬ್ಯಾರಿಕೆಡ್ ತೆರವುಗೊಳಿಸಲು ಸಭೆಯಲ್ಲಿ ಕಲ್ಯಾಣ ಸಂಘದ ಸದಸ್ಯರು ಕೋರಿರುತ್ತಾರೆ. **ಕ್ರಮ ಸಂಚಾರಿ ಪೋಲಿಸ್ ಇನ್ಸ್‌ಪೆಕ್ಟರ್**

- **ತೋಟಗಾರಿಕೆ ಇಲಾಖೆ**

1. ಹಿಂದಿನ ಸಭೆಯ ದಿನಾಂಕ: 20.07.2022 ರಂದು ಚರ್ಚಿಸಿರುವ ವಿಷಯದ ಬಗ್ಗೆ ಇಂದಿನ ಸಭೆಯಲ್ಲಿ ಶ್ರೀ ಚಂದ್ರಶೇಖರ ತೋಟಗಾರಿಕೆ ಅಧೀಕ್ಷಕರವರು ಒಟ್ಟು 31 ಉದ್ಯಾನವನಗಳು ಹೆಚ್.ಎಸ್.ಆರ್ ಬಡಾವಣೆಯಲ್ಲಿದ್ದು, ವರ್ಷಕ್ಕೆ 1076 ಲಕ್ಷಗಳು ಈಗಾಗಲೇ ಉದ್ಯಾನವನಗಳ ನಿರ್ವಹಣೆ ಮಾಡಲಾಗುತ್ತಿದ್ದು, 3 ಉದ್ಯಾನವನಗಳಲ್ಲಿ ಶೌಚಾಲಯವನ್ನು ನಿರ್ಮಿಸಲಾಗಿದ್ದು, ಹಾಗೂ ಸಿಬ್ಬಂದಿ ಕಾವಲುಗಾರರಿಗೆ ವೇತನವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಪಾವತಿ ಮಾಡಲು ಕ್ರಮ ಕೈಗೊಳ್ಳುತಿರುವುದಾಗಿ ಸಭೆಗೆ ತಿಳಿಸಿದರು. ಈ ಬಗ್ಗೆ ಶ್ರೀ ಬಿ.ಎನ್.ಆರ್ ರೆಡ್ಡಿ ವಾರ್ಡ್ ಸದಸ್ಯರು ರವರು ಗುತ್ತಿಗೆದಾರರ ವಿವರ ಮತ್ತು ಅನುದಾನ ಹಂಚಿಕೆಯಾಗಿರುವ ಒಂದು ಉದ್ಯಾನವನಕ್ಕೆ 50-60 ಸಾವಿರ ನಿರ್ವಹಣೆಗಾಗಿ ಗುತ್ತಿಗೆದಾರರಿಗೆ ನೀಡುತ್ತಿದ್ದು, ಗುತ್ತಿಗೆದಾರರು ಕಾವಲುದಾರರಿಗೆ ಕೇವಲ 5-6 ಸಾವಿರ ರೂಗಳನ್ನು ಪಾವತಿ ಮಾಡುತ್ತಿದ್ದು, ಇ.ಎಸ್.ಐ ಮತ್ತು ಪಿ.ಎಫ್. ಬಗ್ಗೆ ಮಾಹಿತಿ ನೀಡಲು ಸಭೆಯಲ್ಲಿ ಕೋರಿರುತ್ತಾರೆ.
2. ವಾರ್ಡ್ ವ್ಯಾಪ್ತಿಯಲ್ಲಿರುವ ಉದ್ಯಾನವನಗಳಲ್ಲಿ ಮಕ್ಕಳ ಆಟದ ಸಾಮಾಗ್ರಿಗಳು, ವ್ಯಾಯಾಮ ಸಾಮಾಗ್ರಿಗಳನ್ನು ಅಳವಡಿಸಲು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಶ್ರೀ ಬಿ.ಎನ್.ಆರ್ ರೆಡ್ಡಿ ರವರು ಪ್ರಸ್ತಾಪಿಸಿದರು ಈ ಬಗ್ಗೆ ಶ್ರೀ ಚಂದ್ರಶೇಖರ ತೋಟಗಾರಿಕೆ ಅಧೀಕ್ಷಕರ ರವರು ಯೋಜನೆ ವಿಭಾಗ ರವರೊಂದಿಗೆ ಜಂಟಿ ತಪಾಸಣೆ ಮಾಡಿ ಶ್ರೀಘ್ರದಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

ಅಂತಿಮವಾಗಿ ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ ರವರು, ವಾರ್ಡ್ ನಂ. 174 ಹಾಗೂ ಕಂದಾಯ ಅಧಿಕಾರಿಗಳು/ಬೊಮ್ಮನಹಳ್ಳಿ ವಲಯ ರವರು ಸಭೆಯಲ್ಲಿ ಚರ್ಚಿಸಲಾದ ಎಲ್ಲಾ ವಿಷಯಗಳ ಬಗ್ಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿ ರವರು ತುರ್ತು ಕ್ರಮವಹಿಸಲು ಸೂಚಿಸಿದರು ಹಾಗೂ ಸಾರ್ವಜನಿಕರು ನೀಡಿರುವ ದೂರಿನ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

N. Rajagopalakrishna

ಅಧ್ಯಕ್ಷರು/ನೋಡಲ್ ಅಧಿಕಾರಿ
ಕಂದಾಯ ಅಧಿಕಾರಿಗಳು/ಬೊಮ್ಮನಹಳ್ಳಿ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ/ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಕಡತಕ್ಕೆ.